**ಓ.ಎಸ್. ನಂಃ 286/2015**

**ಡಿ. ಡಬ್ಲ್ಯೂಃ 1**

**ದಿನಾಂಕ 04.12.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಎಲ್.ವಿ.ಆರ್. ವಕೀಲರಿಂದಃ**

1. ವಾದಿ ನಮಗೆ ತೊಂದರೆ ಕೊಡಬಾರದು ಎಂದು ನಾವು ಈ ದಾವೆಯಲ್ಲಿ ಪರಿಹಾರ ಕೇಳಿರುತ್ತೇವೆ. ಪ್ರತಿವಾದ ಪತ್ರ ಅನುಸೂಚಿ ಆಸ್ತಿಗಳ ಸರ್ವೇ ನಂಬರ್ 593 ಅಂತ ಇರುತ್ತದೆ. ಪ್ರತಿವಾದ ಪತ್ರ ಅನುಸೂಚಿ ಆಸ್ತಿಯ ಮಾರಾಟಗಾರರಾದ ಮಳಲಿ ನಾರಾಯಣಶೆಟ್ಟಿರವರ ಜಮೀನು ರಸ್ತೆ ನಿರ್ಮಾಣಕ್ಕೆ ಭೂ–ಸ್ವಾಧೀನವಾಗಿದ್ದ ಕಾರಣ ಅದಕ್ಕೆ ಪರಿಹಾರವಾಗಿ ಪ್ರತಿವಾದ ಪತ್ರ ಅನುಸೂಚಿ ಆಸ್ತಿಯನ್ನು ಸರಕಾರದವರು ಸದರಿ ಮಳಲಿ ನಾರಾಯಣಶೆಟ್ಟಿರವರಿಗೆ ಮಂಜೂರು ಮಾಡಿದ್ದು, ನಂತರ ಅವರು ಪ್ರತಿವಾದ ಪತ್ರ ಅನುಸೂಚಿ ಆಸ್ತಿಯನ್ನು ನಮಗೆ ಮಾರಾಟ ಮಾಡಿರುತ್ತಾರೆ. ಮಳಲಿ ನಾರಾಯಣಶೆಟ್ಟಿರವರ ಯಾವ ಸರ್ವೇ ನಂಬರಿನ ಎಷ್ಟು ವಿಸ್ತೀರ್ಣದ ಜಮೀನು ರಸ್ತೆ ನಿರ್ಮಾಣಕ್ಕೆ ಭೂ–ಸ್ವಾಧೀನವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮಳಲಿ ನಾರಾಯಣಶೆಟ್ಟಿರವರ ಜಮೀನು ರಸ್ತೆ ನಿರ್ಮಾಣಕ್ಕೆ ಭೂ–ಸ್ವಾಧೀನವಾಗಿತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

2. ಪ್ರತಿವಾದ ಪತ್ರ ಅನುಸೂಚಿ ಆಸ್ತಿಯ ಮಾರಾಟಗಾರರಾದ ಮಳಲಿ ನಾರಾಯಣಶೆಟ್ಟಿ ಬಿನ್ ರಾಮಶೆಟ್ಟಿರವರು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರಲ್ಲ ಎಂದರೆ ಸರಿ. ನಿಡಿ.8 ರ ಮಂಜೂರಾತಿ ಪತ್ರವು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರಿಗೆ ಮಾತ್ರ ಸರಕಾರದವರು ನೀಡುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಡಿ.8 ರ ಮಂಜೂರಾತಿ ಪತ್ರದಲ್ಲಿ ನಮೂದು ಆಗಿರುವ ಸರ್ವೇ ನಂಬರ್ 399 ರಿಂದ 403, 409 ಮತ್ತು 411 ರವರೆಗಿನ ಜಮೀನುಗಳ ಸರ್ವೇ ನಕಾಶೆಗಳನ್ನು ಸರಕಾರದವರು ನೀಡಿರುವುದಿಲ್ಲ. ನಿಡಿ.8 ರ

ಮಂಜೂರಾತಿ ಪತ್ರದಲ್ಲಿ ನಮೂದು ಆಗಿರುವ ಸರ್ವೇ ನಂಬರ್ 399 ರಿಂದ 403, 409 ಮತ್ತು 411 ರವರೆಗಿನ ಜಮೀನುಗಳ ಚೆಕ್ಕುಬಂಧಿ ದೃಢೀಕರಣ ಪತ್ರಗಳನ್ನು ಸಹ ಸರಕಾರದವರು ನೀಡಿರುವುದಿಲ್ಲ. ನಿಡಿ.8 ರ ಮಂಜೂರಾತಿ ಪತ್ರದಲ್ಲಿ ನಮೂದು ಆಗಿರುವ ಸರ್ವೇ ನಂಬರ್ 399 ರಿಂದ 403, 409 ಮತ್ತು 411 ರವರೆಗಿನ ಜಮೀನುಗಳ ಚೆಕ್ಕುಬಂಧಿ ಸಮೇತ ಸರ್ವೇ ನಕಾಶೆಗಳನ್ನು ಸರಕಾರದವರು ನೀಡಿದ್ದರು ಸಹ, ಅದನ್ನು ನಾವು ಉದ್ದೇಶಪೂರಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದ ಪತ್ರ ಅನುಸೂಚಿ ಆಸ್ತಿಯ ಮಾರಾಟಗಾರರಾದ ಮಳಲಿ ನಾರಾಯಣಶೆಟ್ಟಿರವರು ಮರಣ ಹೊಂದಿರುತ್ತಾರೆ ಆದರೆ ಸದರಿ ಅವರ ಮಕ್ಕಳು ಜೀವಂತ ಇದ್ದಾರೆ. ಸದರಿ ನಾರಾಯಣಶೆಟ್ಟಿರವರು "ಶೆಟ್ಟಿ ಜನಾಂಗಕ್ಕೆ" ಸೇರಿದವರು ಎಂದರೆ ಸರಿ. ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ನಾವು ನಿಡಿ.8 ರ ದಾಖಲೆಯನ್ನು ಸುಳ್ಳಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಮಳಲಿ ನಾರಾಯಣಶೆಟ್ಟಿರವರ ಜಮೀನು ರಸ್ತೆ ನಿರ್ಮಾಣಕ್ಕೆ ಭೂ–ಸ್ವಾಧೀನವಾಗಿದ್ದ ಕಾರಣ ಅದಕ್ಕೆ ಪರಿಹಾರವಾಗಿ ಪ್ರತಿವಾದ ಪತ್ರ ಅನುಸೂಚಿ ಆಸ್ತಿಯನ್ನು ಸರಕಾರದವರು ಸದರಿ ಮಳಲಿ ನಾರಾಯಣಶೆಟ್ಟಿರವರಿಗೆ ಮಂಜೂರು ಮಾಡಿತ್ತಾರೆ ಎಂದು ನಿಡಿ.8 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

4. ಸರ್ವೇ ನಂಬರ್ 399 ರಿಂದ 403, 409 ಮತ್ತು 411 ರವರೆಗಿನ ಸರ್ವೇ ನಂಬರುಗಳು ಹೊಸದಾಗಿ ಸರ್ವೇ ನಂಬರ್ 593 ಆಗಿರುತ್ತದೆ ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪ್ರತಿವಾದ ಪತ್ರ ಅನುಸೂಚಿ ಆಸ್ತಿಯನ್ನು 1 ನೇ ಪ್ರತಿವಾದಿ ನಿಡಿ.9 ರ ಅಡಿಯಲ್ಲಿ ಖರೀದಿಸುವ ಪೂರ್ವದಲ್ಲಿ ಅದನ್ನು ಸರ್ವೇ ಮಾಡಿಸಿರುತ್ತಾರೆ. ಸದರಿ ಸರ್ವೇ ನಕಾಶೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪ್ರತಿವಾದ ಪತ್ರ ಅನುಸೂಚಿ ಆಸ್ತಿಯನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡುವ ಪೂರ್ವದಲ್ಲಿ ನಾರಾಯಣಶೆಟ್ಟಿರವರು ಪ್ರತಿವಾದ ಪತ್ರ ಅನುಸೂಚಿ ಆಸ್ತಿಯ ಗಡಿ ಗುರುತು ಮಾಡಿಸಿಕೊಟ್ಟಿರುತ್ತಾರೆ. ನಾರಾಯಣಶೆಟ್ಟಿರವರು ಗಡಿ ಗುರುತು ಮಾಡಿಸಿಕೊಟ್ಟ ಸದರಿ ನಕಾಶೆಯನ್ನು ನಾನು

ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾರಾಯಣಶೆಟ್ಟಿರವರು ಕೇವಲ ಗಡಿ ಕಲ್ಲನ್ನು ಮಾತ್ರ ಹಾಕಿ ಕೊಟ್ಟಿದ್ದು, ಅವರು ಅದರ ಸಂಬಂಧ ಸರ್ವೆ ನಕಾಶೆಯನ್ನು ಮಾಡಿಸಿರುವುದಿಲ್ಲ ಎಂದು ನುಡಿದಿರುತ್ತಾರೆ.

5. ನಿಡಿ.9 ರಲ್ಲಿ ನಮೂದಿಸಿರುವ ಚೆಕ್ಕುಬಂಧಿ ನನಗೆ ಗೊತ್ತಿದೆ. ನಿಡಿ.9 ರ ಚೆಕ್ಕುಬಂಧಿ ಪೂರ್ವಕ್ಕೆ-ನೀರು ಹರಿಯುವ ಹಳ್ಳ, ಪಶ್ಚಿಮಕ್ಕೆ- ವಾದಿಯರ ಜಮೀನು, ಉತ್ತರಕ್ಕೆ– ನಮ್ಮ ಜಮೀನು ಹಾಗೂ ದಕ್ಷಿಣಕ್ಕೆ–ಕಾಲುವೆ ಇದೆ. ನಾನು ಈಗ ಹೇಳಿದ ಚೆಕ್ಕುಬಂಧಿ ಹಾಗೂಾ ನಿಡಿ.9 ರಲ್ಲಿ ನಮೂದಿಸಿರುವ ಚೆಕ್ಕುಬಂಧಿ ಬೇರೆ-ಬೇರೆ ಆಗಿರುತ್ತದೆ ಎಂದರೆ ಸರಿಯಲ್ಲ.

6. ಪ್ರತಿವಾದ ಪತ್ರವನ್ನು ತಯಾರಿಸಲು ನಾನೇ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಪ್ರತಿವಾದ ಪತ್ರ ಅನುಸೂಚಿ ಆಸ್ತಿಗಳ ಚೆಕ್ಕುಬಂಧಿ ನನಗೆ ಗೊತ್ತಿದೆ. ಪ್ರತಿವಾದ ಪತ್ರ 'ಎ' ಅನುಸೂಚಿ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ–ನೀರು ಹರಿಯುಳ ಹಳ್ಳ, ಪಶ್ಚಿಮಕ್ಕೆ- ವಾದಿಯರ ಜಮೀನು, ಉತ್ತರಕ್ಕೆ– ನಮ್ಮ ಜಮೀನು ಹಾಗೂ ದಕ್ಷಿಣಕ್ಕೆ–ಕಾಲುವೆ ಇದೆ. ಪ್ರತಿವಾದ ಪತ್ರ 'ಬಿ' ಅನುಸೂಚಿ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ–ನಮ್ಮ ಜಮೀನು, ಪಶ್ಚಿಮಕ್ಕೆ- ವಾದಿಯರ ಜಮೀನು, ಉತ್ತರಕ್ಕೆ– ನಮ್ಮ ಜಮೀನು ಹಾಗೂ ದಕ್ಷಿಣಕ್ಕೆ–ಕಾಲುವೆ ಇದೆ. ನಾನು ಈಗ ಹೇಳಿದ ಚೆಕ್ಕುಬಂಧಿ ಹಾಗೂಾ ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಪ್ರತಿವಾದ ಪತ್ರ ಅನುಸೂಚಿ ಆಸ್ತಿಗಳ ಚೆಕ್ಕುಬಂಧಿ ಬೇರೆ-ಬೇರೆ ಆಗಿರುತ್ತದೆ ಎಂದರೆ ಸರಿಯಲ್ಲ.

7. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಾವು ಪ್ರತಿವಾದ ಪತ್ರ ಅನುಸೂಚಿ ಆಸ್ತಿಗಳ ಹದ್ದು ಬಸ್ತು ನಕಾಶೆಯನ್ನು ಮಾಡಿಸಿರುತ್ತೇವೆ. ಪ್ರತಿವಾದ ಪತ್ರ 'ಎ' ಅನುಸೂಚಿ ಆಸ್ತಿಯ ದಕ್ಷಿಣ–ಉತ್ತರಾಭಿಮುಖವಾಗಿ ವಾದಿಯು ಪ್ರತಿವಾದ ಪತ್ರ 'ಬಿ' ಅನುಸೂಚಿ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ. ಪ್ರತಿವಾದ ಪತ್ರ 'ಬಿ' ಅನುಸೂಚಿ ಆಸ್ತಿಯನ್ನು ವಾದಿಯು ಒತ್ತುವರಿ ಮಾಡಿದ ಬಗ್ಗೆ ಸರ್ವೆ ನಕಾಶೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಂದೆಯವರು ಮರಣ ಹೊಂದಿ ಈಗ 15 ವರ್ಷಗಳಾಗಿರುತ್ತವೆ. ನನ್ನ ತಂದೆ 2012 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆಯವರು ಜೀವಂತ ಇದ್ದಾಗಲೇ ಪ್ರತಿವಾದ ಪತ್ರ 'ಬಿ' ಅನುಸೂಚಿ ಆಸ್ತಿಯನ್ನು

ವಾದಿಯರು ಒತ್ತುವರಿ ಮಾಡಿರುತ್ತಾರೆ. ನನ್ನ ತಂದೆಯವರು ಪ್ರತಿವಾದ ಪತ್ರ 'ಬಿ' ಅನುಸೂಚಿ ಆಸ್ತಿಯ ಒತ್ತುವರಿ ಮಾಡಿರುವ ಬಗ್ಗೆ ನಕಾಶೆಯನ್ನು ತಯಾರಿಸಿದ್ದರು. ಸದರಿ ನಕಾಶೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

8. ಪ್ರತಿವಾದ ಪತ್ರ ಅನುಸೂಚಿ ಆಸ್ತಿಗಳು ಎಂದಿಗೂ ಸಹ ನಾರಾಯಣಶೆಟ್ಟರವರಿಗೆ ಸರಕಾರದಿಂದ ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.2 ರಲ್ಲಿ ಸರ್ವೇ ನಂಬರ್ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದ ಪತ್ರ 'ಬಿ' ಅನುಸೂಚಿ ಆಸ್ತಿಯನ್ನು ವಾದಿಯರು ಒತ್ತುವರಿ ಮಾಡಿದ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**